ಶ್ರೀ ಬಿ. ರಾಚಯ್ಯ.—ಸ್ವಾಮಿ ಇಲ್ಲಿ ಎರಡನೆಯ ಆಪಾದನೆಯನ್ನು ಹೊರಿಸಿದ್ದಾರೆ. ಆ ಆಪಾದನೆ ಸಾಬೀತಾದ ಮೇಲೆ ಸಸ್ಪೆಂಡ್ ಮಾಡುವುದೊ ಅಥವಾ ಡಿಸ್‌ಮಿಸ್ ಮಾಡುವುದು ಆಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ನಮ್ಮ ವರದಿಯಲ್ಲಿಯೇ ಈರಪ್ಪ ಬಸಪ್ಪನವರ ಮೇಲೆ ಆರಕ್ಷಕ ಉಪನಿರೀಕ್ಷಕರು ಹೊಡೆದಿದ್ದಾರೆಂದು ವರದಿಯಾಗಿದೆ. ಅದನ್ನು ನಾನು ಹೇಳುತ್ತಿರುವುದಲ್ಲ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಅದರ ಹಿಂದಿನ ಪ್ಯಾರಾವನ್ನು ಓದಿಕೊಳ್ಳಬೇಕು. ಹುಬ್ಬಳ್ಳಿಯ ಗ್ರಾಮಾಂತರ ಆರಕ್ಷಕ ಉಪ ಅಧೀಕ್ಷಕರವರನ್ನು ಇಲಾಖಾ ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿದ್ದು ಅವರು ಈ ಕೆಳಕಂಡ ಆಪಾದನೆಗಳನ್ನು ಹೊರಿಸಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಅದು ಹಾಗಿದ್ದರೆ ಎನ್‌ಕ್ವೈರಿ ಮಾಡಿಸಿ. ಎನ್‌ಕ್ವೈರಿ ಮಾಡಿಸುವಾಗ ಅಲ್ಲಿಯ ಸಬ್‌ಇನ್ಸ್‌ಪೆಕ್ಟರ್‌ನ್ನು ಅಲ್ಲಿಯೇ ಇಟ್ಟು ಎನ್‌ಕ್ವೈರಿ ಮಾಡಿಸಂದುದಾದರೆ ನ್ಯಾಯ ಹೇಗೆ ಸಿಗಂತ್ತದೆ ?

ಅಧ್ಯಕ್ಷರು.—ಮಾನ್ಯ ಪಾಟೀಲ್‌ರವರೇ ಮಾನ್ಯ ಸಚಿವರು ಎನ್‌ಕ್ವೈರಿ ಮಾಡಿಸುತ್ತೇನೆಂದು ಹೇಳಿರುತ್ತಾರೆ.

ಶ್ರೀ ಕೆ.ಎಚ್. ಪಾಟೀಲ್.—ಹಾಗಾಗದಿದ್ದರೆ ನಮಗಿರತಕ್ಕಂಥ ಹಕ್ಕುಗಳನ್ನು ಮೊಟಕುಗೊಳಿಸಿದಂತಾಗುತ್ತದೆ. ಯಾರ ಮೇಲೆ ಎನ್‌ಕ್ವೈರಿ ಮಾಡಿಸಬೇಕೆಂದು ಹೇಳುತ್ತೇವೆಯೋ ಅವರನ್ನು ಅಲ್ಲಿಂದ ತೆಗೆಯಿರಿ, ತೆಗೆದು ಎನ್‌ಕ್ವೈರಿ ಮಾಡಿ. ಮಾನ್ಯ ರಾಚಯ್ಯನವರು ಹೇಗೆ ಮಂಂದಃಪರಿಯಾತ್ತಾರೋ ಎಸ್ತು ವುದನ್ನು ನಾವು ನೋಡಬೇಕಾಗಿದೆ. ಇಲ್ಲಿಯತನಕ ನಿಮ್ಮ ಬಗ್ಗೆ ಗೌರವಿಟ್ಟು ಕೊಂಡಿರುತ್ತೇವೆ. ಎನ್‌ಕ್ವೈರಿ ನಿಷ್ಪಕ್ಷಪಾತವಾಗಿ ನಡೆಯಬೇಕಿದ್ದರೆ, ಅಲ್ಲಿ ಸಾಕ್ಷಿ ಸರಿಯಾಗಿ ಆಗಬೇಕು ಎನ್ನುವುದಂ ಇದ್ದರೆ ಆತನನ್ನು ಬೇರೆ ಕಡೆಗೆ ವರ್ಗ ಮಾಡಿ ಆಮೇಲೆ ಎನ್‌ಕ್ವೈರಿ ಮಾಡಿ.

ಅಧ್ಯಕ್ಷರು.—ಮಾನ್ಯ ಸಚಿವರು, ಮಾನ್ಯ ಸದಸ್ಯರು ಕೊಟ್ಟ ಸಲಹೆಯನ್ನು ನೋಟ್ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ಮತ್ತೆ ಈಗ ಮಾನ್ಯ ಸದಸ್ಯರಾದ ಆರ್. ರಾಮಯ್ಯನವರು ಮತ್ತು ಮಾನ್ಯ ಬಿ ಆರ್. ನೀಲಕಂಠಪ್ಪನವರು ಕಳುಹಿಸಿರುವ ಗಮನ ಸೆಳೆಯುವ ಸೂಚನೆಯ ಬಗ್ಗೆ ಮಾನ್ಯ ಸಚಿವರ ಗಮನವನ್ನು ಸೆಳೆಯಬೇಕೆಂದು ಹೇಳುತ್ತೇನೆ.

(ii) ಭದ್ರಾವತಿಯ ಶ್ರೀಮತಿ ವೀರಮ್ಮ ಎನ್ನುವವರನ್ನು ವಲಯ ಅರಣ್ಯಾಧಿಕಾರಿಗಳಂ ಹೊಡೆದಿರುವುದು.

ಶ್ರೀ ಬಿ.ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ ನಾವುಗಳು ಕಳುಹಿಸಿರುವ ಗಮನ ಸೆಳೆಯುವ ಸೂಚನೆಯ ಬಗ್ಗೆ ಮಾನ್ಯ ರಾಜ್ಯ ಅರಣ್ಯ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಬಿ.ಎ. ಜಿವಿಜಯ (ಅರಣ್ಯ ರಾಜ್ಯ ಸಚಿವರು).—ಈ ಫಿರ್ಯಾದನ್ನು ಈಗಾಗಲೇ ಸಹಾಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾ ಅಧಿಕಾರಿ, ಭದ್ರಾವತಿ ವಿಭಾಗ, ಇವರ ಸಹಾಯಕ, ಮುಖ್ಯ ಮಂತ್ರಿಯವರ ಸಚಿವಾಲಯದಿಂದ ಬಂದ ತಂತಿ ಸಂದೇಶದಂತೆ, ವಿಚಾರಣೆ ನಡೆಸಿರುತ್ತಾರೆ. ಈ ವಿಚಾರಣಾ ವರದಿಯನ್ನು, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು, ಅವರ ಆರ್ ಸರ್ಕಾರ ಪತ್ರದ ಸಂಖ್ಯೆ ಎ ೨ ಎಎಲ್‌ಜಿ ೫೪೭೦–೮೫–೮೬ ದಿನಾಂಕ ೧೨–೧೨–೧೯೮೫ರಲ್ಲಿ, ಈಗಾಗಲೇ ಮುಖ್ಯಮಂತ್ರಿಯವರು ಕಾರ್ಯದರ್ಶಿಯವರಿಗೂ ಹಾಗೂ ಪಶುಸಂಗೋಪನೆ, ಮೀನುಗಾರಿಕೆ ಮತ್ತು ಅರಣ್ಯ ಇಲಾಖೆಯ ಕಾರ್ಯದರ್ಶಿಯವರಿಗೂ ಒಪ್ಪಿಸಿರುತ್ತಾರೆ. ಇದಂ ಅಲ್ಲದೇ ಈ ಫಿರ್ಯಾದನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಅರಣ್ಯ ಸಂಚಾರಿ ದಳ ಚಿನ್ನಗಿರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯ ಪ್ರಾಣಿ ಸಂರಕ್ಷಣೆ, ಶಿವಮೊಗ್ಗ ಇವರುಗಳೂ ಕೂಡ ವಿಚಾರಣೆ ಮಾಡಿರುತ್ತಾರೆ.

ಈ ಪ್ರಕರಣದ ವಿವರಗಳಂ ಸಂಕ್ಷಿಪ್ತವಾಗಿ ಈ ಕೆಳಕಂಡಂತಿದೆ.—

ದಿನಾಂಕ ೧೨-೧೧-೮೯ರೆಂದು ಶ್ರೀಮತಿ ವೀರಮ್ಮ ಅವರು ತಮ್ಮ ಮಗಳೊಂದಿಗೆ ಭದ್ರಾ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ಕಾನೂನು ಬಾಹಿರವಾಗಿ ಕಟ್ಟಿಗೆಯನ್ನು ಸಂಗ್ರಹಿಸುತ್ತಿದ್ದರು. ಈ ಭದ್ರಾ ಕಾಯ್ದಿಟ್ಟ ಅರಣ್ಯವು ಭದ್ರಾ ಅಭಯಾರಣ್ಯದ ಕೋರ್ ಏರಿಯಾ ಆಗಿದೆ. ವನ್ಯ ಪ್ರಾಣಿ ಸಂರಕ್ಷಣಾ ವಲಯ ಅರಣ್ಯ ಅಧಿಕಾರಿ, ಲಕ್ಕವಳ್ಳಿ ಇವರು ಮೇಲೆ ತಿಳಿಸಿದ ಶ್ರೀಮತಿ ವೀರಮ್ಮ ಮತ್ತು ಅವರ ಮಗಳನ್ನು ಇನ್ನು ಮುಂದೆ ಕಾಯ್ದಿಟ್ಟ ಅರಣ್ಯ ಪ್ರದೇಶವನ್ನು ಪ್ರವೇಶಿಸಕೂಡದೆಂದು ಗದರಿಸಿ ಕಳುಹಿಸಿದರು. ಅದೇ ದಿನ ಶ್ರೀಮತಿ ಗಂಗಮ್ಮ ಅವರ ಗಂಡ ಮತ್ತು ಮಕ್ಕಳು ಮೇಲೆ ಹೇಳಿದ ಅಭಯಾರಣ್ಯದಲ್ಲಿ ಕಟ್ಟಿಗೆ ಸಂಗ್ರಹಿಸುತ್ತಿದ್ದುದನ್ನು ಕಂಡು ಅವರನ್ನು ಇನ್ನು ಮುಂದೆ ಕಾಡಿಗೆ ಬರಕೂಡ ದೆಂದು ಎಚ್ಚರಿಸಿ ಮೇಲೆ ಹೇಳಿದ ವಲಯ ಅರಣ್ಯ ಅಧಿಕಾರಿಯವರು ಕಳುಹಿಸಿದರು.

ಶ್ರೀಮತಿ ವೀರಮ್ಮ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸಂಚಾರಿ ಅರಣ್ಯ ದಳ ಮತ್ತು ಸಹಾ ಯಕ ಅರಣ್ಯ ಸಂರಕ್ಷಣಾಧಿಕಾರಿ ವನ್ಯ ಪ್ರಾಣಿ ಸಂರಕ್ಷಣೆ, ಶಿವಮೊಗ್ಗ ಇವರ ಮುಂದೆ ತಾರೀಖು ೩-೧೨-೮೫ ರಂದು ಕೊಟ್ಟ ಹೇಳಿಕೆಯಲ್ಲಿ ವನ್ಯ ಪ್ರಾಣಿ ಸಂರಕ್ಷಣಾ ವಲಯ ಅರಣ್ಯ ಅಧಿಕಾರಿ ಲಕ್ಕವಳ್ಳಿ ಯವರು ತನಗೆ ಹೊಡೆದಿಲ್ಲವೆಂದು ಹೇಳಿರುತ್ತಾರೆ.

ಶ್ರೀಮತಿ ಗಂಗಮ್ಮನವರು ಮೇಲೆ ಹೇಳಿದ ಸಹಾಯಕ ಅರಣ್ಯಾಧಿಕಾರಿಗಳ ಮುಂದೆ ತಾರೀಖು ೩-೧೨-೮೫ ರಂದು ಕೊಟ್ಟ ಹೇಳಿಕೆಯಂತೆ ತಾವು ಭದ್ರ ಕಾದಿಟ್ಟ ಅರಣ್ಯವನ್ನು ಅವರ ಮಕ್ಕಳು ಮತ್ತು ಗಂಡ ಶ್ರೀ ಚೆನ್ನಪ್ಪನವರ ಜತೆಯಲ್ಲಿ ಕಟ್ಟಿಗೆಯನ್ನು ಸಂಗ್ರಹಿಸಲು ಕಾನೂನು ಬಾಹಿರವಾಗಿ ಹೋಗಿದ್ದುದು ನಿಜವೆಂದು ಒಪ್ಪಿಕೊಂಡಿರುತ್ತಾರೆ. ವನ್ಯ ಪ್ರಾಣಿ ಸಂರಕ್ಷಣೆಯ ವಲಯ ಅರಣ್ಯ ಅಧಿಕಾರಿ ಲಕ್ಕವಳ್ಳಿ ಇವರು ತಮ್ಮೆಲ್ಲರನ್ನು ಹಿಡಿದು ಅವರ ಹತ್ತಿರವಿದ್ದ ಕೊಡು ಗೋಲನ್ನು ಕೊಡುವಂತೆ ಹೇಳಿದರು. ಶ್ರೀಮತಿ ಗಂಗಮ್ಮನವರು ಕೊಡುಗೋಲನ್ನು ಕೊಡಲು ನಿರಾಕರಿಸಿದಾಗ ವಲಯ ಅರಣ್ಯಾಧಿಕಾರಿಯವರು ತಮ್ಮನ್ನು ಹೊಡೆದರೆಂದು ಹೇಳಿಕೆಯನ್ನು ನೀಡಿ ದ್ದಾರೆ. ಆದರೆ ತಾರೀಖು ೧೨-೧೧-೮೫ ರಂದು ಪ್ರಕರಣ ನಡೆದಾಗ ಇದ್ದ ಶ್ರೀಮತಿ ಗಂಗಮ್ಮನವರ ಗಂಡ ಶ್ರೀ ಚೆನ್ನಪ್ಪನವರು ತಾರೀಖು ೩-೧೨-೮೫ ರಂದು ಕೊಟ್ಟ ತಮ್ಮ ಹೇಳಿಕೆಯಲ್ಲಿ ತಮ್ಮ ಹೆಂಡತಿಗೆ ವನ್ಯ ಸಂರಕ್ಷಣೆಯ ವಲಯ ಅರಣ್ಯ ಅಧಿಕಾರಿಯವರಂ ಹೊಡೆದರೆಂಬುದನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದಾರೆ.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಚೆನ್ನಗಿರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯ ಪ್ರಾಣಿ ಸಂರಕ್ಷಣೆ, ಶಿವಮೊಗ್ಗ ಇವರ ಹೇಳಿಕೆಯಂತೆ ಮೇಲೆ ಹೇಳಿದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಶ್ರೀ ಬಿ.ಆರ್. ನೀಲಕಂಠಪ್ಪ, ವಿಧಾನಸಭಾ ಸದಸ್ಯರು, ತರೀಕೆರೆ ಇವರನ್ನು ದಿನಾಂಕ ೩-೧೨-೮೫ರ ಸಾಯಂಕಾಲ ಸಂದರ್ಶಿಸಲು ಹೋದಾಗ ಅವರು ತಾರೀಖು ೧೦-೧೨-೮೫ ರಂದು ತರೀಕೆರೆಯಲ್ಲಿ ಸಂದರ್ಶಿಸಲು ಹೇಳಿದರು. ಅದರಂತೆ ಈ ಇಬ್ಬರು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ತಾರೀಖು ೧೦-೧೨-೮೫ ರಂದು ವಿಧಾನಸಭಾ ಸದಸ್ಯರನ್ನು ಸಂದರ್ಶಿ ಸಿದಾಗ ಅವರು ಈ ಮೊದಲೇ ಫಿರ್ಯಾದನ್ನು ಕೊಟ್ಟಿರತಕ್ಕ ವಲಯ ಅರಣ್ಯಾಧಿಕಾರಿಗಳ ವಿಚಾರದಲ್ಲಿ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಹಾಗೂ ಈ ಫಿರ್ಯಾದು ಸ್ಥಳೀಯ ಜನಗಳ ಕಿವಿ ಮಾತಿನಿಂದ ನಡೆದಿದೆ ಎಂದು ತಿಳಿಸಿದರೆಂದು ಒಪ್ಪಿಸಿರುತ್ತಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕನಾಥ್ ಪರೀಕ್ಷಾರ್ಥವಾಗಿರುವ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಮೇಲೆ ಫಿರ್ಯಾದನ್ನು ಕೊಡಲಾಗಿದೆ. ಆದರೆ ಈ ಅಧಿಕಾರಿಯು ತಾರೀಖು ೧೨-೧೧-೮೫ ರಂದು ಈ ಪ್ರಕರಣ ನಡೆದ ಸಮಯದಲ್ಲಿ ಹಾಜರಿರಲಿಲ್ಲ. ಈ ವಿಷಯವು ಶ್ರೀಮತಿ ವೀರಮ್ಮನವರ ಹೇಳಿಕೆಯಲ್ಲಿ ವೇದ್ಯವಾಗಿದೆ.

ಮೇಲೆ ಹೇಳಿದ ವಿಚಾರಗಳಿಂದ ಕೆಲವು ಪಟ್ಟ ಭದ್ರ ಹಿತಾಸಕ್ತಿಯುಳ್ಳ ಜನಗಳು ವನ್ಯಪ್ರಾಣಿ ಸಂರಕ್ಷಣೆ ವಲಯಾರಣ್ಯ ಅಧಿಕಾರಿಗಳ ಮೇಲೆ ತಮ್ಮ ಸ್ವಂತ ಅನುಕೂಲಕ್ಕಾಗಿ ದೂರುಗಳನ್ನು ಮಾಡುತ್ತಿರುವುದನ್ನು ಗಮನಿಸಬಹುದು ಮತ್ತು ಅರಣ್ಯ ಅಧಿಕಾರಿಗಳು ನಿಮ್ನವರ್ಗಕ್ಕೆ ಸೇರಿದ ಮಹಿಳೆಯವರ ಮೇಲೆ ಅತ್ಯಾಚಾರ ನಡೆಸಿರುತ್ತಾರೆ ಎಂಬ ದೂರು ಸತ್ಯಕ್ಕೆ ದೂರವಾಗಿದೆ ಎಂದು ತಿಳಿಸಲು ಇಚ್ಛಿಪಡುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ ನಾನು ಕಣ್ಣಾರೆ ಕಂಡದ್ದು. ನಾನು ಈ ಘಟನೆ ನಡೆದ ಅರ್ಧಗಂಟೆಯ ನಂತರ ಅಲ್ಲಿಗೆ ಹೋದದ್ದು. ಅವರು ಏನು ವರದಿಯನ್ನು ಕೊಟ್ಟಿರು ತ್ತಾರೆ ಅದಂ ನೂರಕ್ಕೆ ನೂರು ಸುಳ್ಳು ವರದಿಯಾಗಿದೆ. ನಿಜಕ್ಕೂ ಅಲ್ಲಿ ಆಗಿರತಕ್ಕಂಥ ವಿಷಯದ ಬಗ್ಗೆ ಮೆಡಿಕಲ್ ರಿಪೋರ್ಟ್ ಇದೆ ಮತ್ತು ಪೋಲೀಸ್ ರಿಪೋರ್ಟ್ ಇದೆ.

ಅಧ್ಯಕ್ಷರು.—ಅದನ್ನು ಮಾನ್ಯ ಸಚಿವರಿಗೆ ಕಳುಹಿಸಿಕೊಡಿ. ನಿಮ್ಮನ್ನು ಕರೆಯಿಸಿಕೊಂಡು ಡಿಸ್ ಕಸ್ ಮಾಡುವಂತೆ ಹೇಳುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ ಹರಿಜನ ಮಹಿಳೆಯರ ಮೇಲೆ ಮತ್ತು ಹಿಂದಂಳಿದ ಜನರ ಮೇಲೆ ಹಲ್ಲೆ ಆಗುತ್ತಿದೆ. ಅವರು ಉರುವಲು ಸೌದೆಯನ್ನು ತರಲಿಕ್ಕೂ ಹೋಗಿಲ್ಲ, ಏನಕ್ಕೂ ಹೋಗಿಲ್ಲ ಆ ಮಹಿಳೆಯರ ಬಟ್ಟೆಗಳನ್ನು ಹರಿದಿದ್ದಾರೆ. ಮತ್ತೆ ಅವರನ್ನು ಕೆಳಗಿನಿಂದ ಮೇಲಿನವರೆಗೂ ಹೊಡೆದಿದ್ದಾರೆ ಅವರು ಏನು ಹೇಳುತ್ತಾರೆಂದರೆ ನಿಮ್ಮ ಸರ್ಕಾರದವರಂ ಬಟ್ಟೆ ಗಳನ್ನು ಕೊಡುತ್ತೇವೆಂದು ಹೇಳಿ ಬಟ್ಟೆಯಂನ್ನೇ ಹರಿಯತಕ್ಕಂಥ ಅಧಿಕಾರಿಗಳನ್ನು ಇಟ್ಟುಕೊಂಡಿ ದ್ದೀರಿ, ಮಾನಭಂಗವನ್ನು ಮಾಡತಕ್ಕಂಥ ಅಧಿಕಾರಿಗಳನ್ನು ಇಟ್ಟುಕೊಂಡಿರುತ್ತೀರಿ. ನಮ್ಮ ಮಾನವನ್ನು ಕಾಪಾಡಿ ಎಂದು ಕೇಳುತ್ತಿದ್ದಾರೆ. ಬಟ್ಟೆಯನ್ನು ಹರಿದಿದ್ದಾರೆಂದಂ ಎನ್ನುವುದು ದೊಡ್ಡ ಆರೋಪವಾಗಿದೆ ಅಲ್ಲಿ ಅಧಿಕಾರಿಗಳಿಂದ ನೂರಕ್ಕೆ ನೂರು ಕಳ್ಳಸಾಗಾಣಿಕೆಯಾಗುತ್ತಿದೆ. ಪ್ರಾಣಿಗಳನ್ನು ಕೊಲೆ ಮಾಡುತ್ತಿದ್ದಾರೆ. ಆದ್ದರಿಂದ ಈ ಸದನದ ಒಂದು ಸಮಿತಿಯನ್ನು ಮಾಡಿ. ಅಲ್ಲಿ ನೂರಕ್ಕೆ ನೂರರಷ್ಟು ಗಂಧದ ಮತ್ತಿತರ ಸಾಮಾನುಗಳು ಕಳ್ಳಸಾಗಾಣಿಕೆಯಾಗುತ್ತಿದೆ. ಅದನ್ನು ತಡೆಯಂವುದು ಬಿಟ್ಟು ಸಾಮಾನ್ಯ ಮಹಿಳೆ ಅವಳ ಗಂಡ ನಿಜಕ್ಕೂ ಉರುವಲು ತರಲಿಕ್ಕೆ ಹೋಗಿಲ್ಲದಿದ್ದರೂ ಅವರನ್ನು ಎಳೆದಂಕೊಂಡು ಬಂದು ಒತ್ತಾಯಮಾಡಿ ವರದಿಯನ್ನು ತಯಾರು ಮಾಡಿದ್ದಾರೆ. ಇದು ಪೋಲೀಸ್ ರಿಪೋರ್ಟ್ ಆಗಿದೆ ನಿಜಕ್ಕೂ ಇವರು ಈ ಸದನವನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ತಪ್ಪಿತಸ್ಥ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸಚಿವರನ್ನು ಈ ವಿಚಾರದ ಬಗ್ಗೆ ನಿಮ್ಮನ್ನು ಕರೆಯಿಸಿ ಡಿಸ್‌ಕಸ್ ಮಾಡು ವಂತೆ ಹೇಳುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ ನಾನೇ ಅವರನ್ನು ಆಸ್ಪತ್ರೆಗೆ ಸೇರಿ ಸಿದ್ದೇನೆ.

(ಗೊಂದಲ)

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಮಂತ್ರಿಗಳು ಕಾನ್‌ಫಿಡೆನ್ಷಿಯಲ್ ಆಗಿ ಈ ವಿಚಾರದ ಬಗ್ಗೆ ತಿಳಿದಂಕೊಳ್ಳದಿದ್ದರೆ ಮಹ ಘೋರ ಅಪರಾಧವಾಗುತ್ತದೆ.

ಅಧ್ಯಕ್ಷರು.—ಮಾನ್ಯ ನೀಲಕಂಠಪ್ಪನವರೇ ಮಾನ್ಯ ಸಚಿವರ ಜೊತೆ ಅವರ ಚೇಂಬರ್‌ನಲ್ಲಿ ಈ ವಿಷಯ ಬಗ್ಗೆ ಚರ್ಚೆ ಮಾಡಿ ಎಂದು ಹೇಳುತ್ತಿದ್ದೇನೆ.

SRI B. A. JIVIJAYA.— I totally deny this. I am not going to suspend any officer like that. ನಾನು ಯಾವ ಅರಣ್ಯ ಅಧಿಕಾರಿಯನ್ನು ರಕ್ಷಣೆ ಮಾಡು ವುದಕ್ಕೆ ಹೋಗುತ್ತಿಲ್ಲ. ಮತ್ತೆ ಮಾನ್ಯ ಸದಸ್ಯರು ಸಂಮ್ಮನೆ ಅವರ ಮೇಲೆ ಆಪಾದನೆ ಮಾಡಿದರೆ ಅವರನ್ನು ಸಸ್‌ಪೆಂಡ್ ಮಾಡಲಿಕ್ಕೆ ನಾನು ತಯಾರಾಗಿಲ್ಲ. ಅವರು ಯಾವ ರೀತಿ ಅನಾಚಾರವನ್ನು ಮಾಡಿಲ್ಲ. ಅವರು ಕೋರಿ ಎರೆಯಂಲಿಕ್ಕೆ ಹೋಗಿದ್ದಾಗ ಅವರನ್ನು ಗದರಿಸಿ ಕಳುಹಿಸಿದ್ದಾರೆ. ಅಂಥವರನ್ನು ಸಸ್‌ಪೆಂಡ್ ಮಾಡಿ, ಅಥವಾ ಟ್ರಾನ್ಸ್‌ಫರ್ ಮಾಡಿ ಎಂದು ಕೇಳಿದರೂ ಅದನ್ನು ಕೂಡ ಮಾಡುವುದಿಲ್ಲ. ನಿಸ್ಪಕ್ಷಪಾತವಾಗಿ ಅವರು ತಮ್ಮ ಕರ್ತವ್ಯವನ್ನು ಮಾಡಿದ್ದಾರೆ. ಈ ರೀತಿಯಾಗಿ ಅಧಿಕಾರಿಗಳ ಮೇಲೆ ಸಮ್ಮನೇ ಆಪಾದನೆಯನ್ನು ಮಾಡತಕ್ಕಂಥದ್ದು ಸರಿಯಾದುದಲ್ಲ. ಈ ರೀತಿ ಆಪಾದನೆ ಮಾಡುವುದು ಸರಿಯಲ್ಲ. ಇದರಿಂದ ನನಗೆ ಬಹಳೆ ಬೇಸರವಾಗುತ್ತದೆ. ಅರಣ್ಯವನ್ನು ಉಳಿಸಿಕೊಡಬೇಕೆಂದು ಹೇಳುತ್ತಾರೆ, ಅರಣ್ಯವನ್ನು ಸಂರಕ್ಷಣೆ ಮಾಡಬೇಕೆಂದು ಹೇಳುತ್ತಾರೆ. ಎಲ್ಲಿ

ದನ್ನ, ಕರಿ, ಚಿರತೆ ಇದೆ ಎಂಬುದನ್ನು ಅವರು ನೋಡಬೇಕು. ೬೫ ವರ್ಷದ ತಾಯಿಯನ್ನು ರೇಪ್ ಮಾಡಿದ್ದಾರೆಂದು ಆಪಾದನೆ ಮಾಡುವುದು ನನಗೆ ಬಹಳ ಬೇಸರವನ್ನುಂಟು ಮಾಡಿದೆ. ನಾನು ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡುವುದಿಲ್ಲ.

ಶ್ರೀ ಬಿ. ಆರ್. ನೀಲಕಂಠಪ್ಪ.—ಸ್ವಾಮಿ.....

ಅಧ್ಯಕ್ಷರು.—ಇದು ಗಮನ ಸೆಳೆಯುವ ಸೂಚನೆ. ನೀವು ಅವರ ಕೂಡ ಚರ್ಚೆ ಮಾಡಿ.

ಶ್ರೀ ಬಿ. ಆರ್. ನೀಲಕಂಠಪ್ಪ.—ಇದು ನಿಜವಾಗಿ ಬಹಳ ಅನ್ಯಾಯವಾಗಿರತ್ತದೆ. ಆಲ್ಲಿ ಮಹಿಳೆಯರನ್ನು, ಹುಡುಗಿಯರನ್ನು ಕೊಲೆ ಮಾಡುವಂಥ ಅಧಿಕಾರಿಗಳು ಇದ್ದಾರೆ. ದಯವಿಟ್ಟು ಅವರನು ಸಸ್ಪೆಂಡ್ ಮಾಡಿ.

ಅಧ್ಯಕ್ಷರು.—ಅವರನ್ನು ಕರೆಯಿಸಿ ಚರ್ಚೆ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಅವರ ಪಕ್ಷದವರು ಮತ್ತು ಈ ಕಡೆಯವರು ಸಮಸ್ಯೆಯನ್ನು ಎತ್ತಿದ್ದಾರೆ. ಪೂರ್ಣ ವಿಂತ್ರಿಗಳು ಹೇಳತಕ್ಕದ್ದು ಸರಿ ಇದೆ ಎನ್ನುವುದಾದರೆ, ಯಾವುದು ಸತ್ಯಾಂಶ ಇದೆ ಎಂಬುದಕ್ಕೆ ವಿಚಾರಣೆ ಆಗಲಿ. ಆ ಮಾತು ಬೇರೆ. ಇಲ್ಲಿರತಕ್ಕ ಪ್ರಶ್ನೆ ಇಷ್ಟೆ. ಟ್ರಾನ್ಸ್‌ಫರ್ ಮತ್ತು ಸಸ್ಪೆಂಡ್ ಮಾಡಿ ಎಂಬ ವಾದ ಇದ್ದರೆ, ಮುಂಚಿನಿಂದ ಕೇಳುತ್ತಿದ್ದರೆ ಪ್ರಜುಂಡಿಸ್ ಇಟ್ಟುಕೊಂಡು ಆ ಮೇಲೆ ಪೆಡ್ಡೂಲ್ ಕ್ಯಾಸ್ಟ್ ಹೆಣ್ಣು ಮಕ್ಕಳ ಮೇಲೆ ಆಪಾದನೆ ಹಾಕಿದರೆ ಸಸ್ಪೆಂಡ್ ಮಾಡುತ್ತಾರೆ, ಟ್ರಾನ್ಸ್‌ಫರ್ ಮಾಡುತ್ತಾರೆಂಬ ಅಭಿಪ್ರಾಯದಿಂದ ಅವರು ಹೇಳಿದ್ದರೆ ಈ ಸದನದಲ್ಲಿ ವೆರಿಫಿಕೇಷನ್ ಮಾಡಿ ಇದರ ಬಗ್ಗೆ ಒಂದು ವಿಚಾರಣಾ ವರದಿಯನ್ನು ಇಡಬೇಕು. ಇಲ್ಲದಿದ್ದರೆ ನಾಳೆ ಯಾವುದೇ ಗಂಭೀರ ಸಮಸ್ಯೆಗಳನ್ನು ಸದನದಲ್ಲಿ ತಂದಾಗ ಇದೇ ರೀತಿ ಹಗುರವಾಗಿ ಮಾತನಾಡತಕ್ಕದ್ದು ಆಗಬಾರದೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇದು ಈ ಮಟ್ಟಕ್ಕೆ ಮುಂಟ್ಟಬಾರದಾಗಿತ್ತು. ಇದರ ಬಗ್ಗೆ ವಿಚಾರಣೆಯಾಗಿ ನಿಜವಾದ ಪರಿಸ್ಥಿತಿ ಏನು ಇತ್ತು ಎಂಬುದರ ಬಗ್ಗೆ ವರದಿಯನ್ನು ಈ ಸದನದ ಮುಂದಿಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎ. ಜೀವಿಜಯ.—ಇದರ ಬಗ್ಗೆ ಸಂಪೂರ್ಣವಾಗಿ ಎನ್‌ಕ್ವೈರಿ ಮಾಡಿಸಿ ಇಲಾಖೆಯಿಂದ ವರದಿ ತರಿಸಿಕೊಂಡಿದ್ದೇನೆ. ಪೋಲೀಸರಿಗೆ ಪಿರ್ಯಾದು ಕೊಟ್ಟಿದ್ದರೆ ಪೋಲೀಸ್ ಇಲಾಖೆಯವರು ಕ್ರಮ ತೆಗೆದು ಕೊಳ್ಳುತ್ತಿದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮಗೆ ಅದು ಬೇಕಾಗಿಲ್ಲ. ಅವರ ತಪ್ಪಿದ್ದರೆ ನಾವು ಇಲ್ಲಿ ಕೇಳೋಣ. ಈ ರೀತಿ ಪೆಡ್ಡೂಲ್ಡ್ ಕ್ಯಾಸ್ಟ್ ಹೆಸರನ್ನು ಬಳಸಿ ತಮ್ಮ ಮಾತಿನಂತೆ ನಡೆಯಬೇಕೆಂಬ ರೀತಿ ಇದ್ದರೆ ಈ ಸದನವನ್ನು.....

ಶ್ರೀ ಬಿ ಎ ಜೀವಿಜಯ.—ಯಾರ ಹೆಸರಿನಲ್ಲಿ ಸಹಿ ಹಾಕಿ ಕೊಟ್ಟಿದ್ದಾರೆ ಅವರು ಇದು ನನ್ನ ಸಹಿ ಅಲ್ಲ, ದುರುದ್ದೇಶದಿಂದ ಅಧಿಕಾರಿಗಳನ್ನು ವರ್ಗ ಮಾಡಿಸುವುದಕ್ಕೆ ಅರ್ಜಿಯನ್ನು ಬರೆದಿದ್ದಾರೆಂದು ಹೇಳಿಕೆ ಕೊಟ್ಟಿದ್ದಾರೆ. ಸಾಮ್ಯಾನಿ ಪರಿಶಿಷ್ಟ ವರ್ಗದವರ ಹೆಸರಿನಲ್ಲಿ ಮಾಲಿಷ್ ಆಗಿದೆ ಎಂದು ಅಧಿಕಾರಿಗಳ ಮೇಲೆ ಆಪಾದನೆ ಮಾಡಿದ ಕೂಡಲೇ ಕ್ರಮವನ್ನು ತೆಗೆದುಕೊಂಡರೆ ಅಧಿಕಾರಿಗಳ ಡೀಮಾರಲೈಸ್ ಆಗುತ್ತದೆ.

ಅಧ್ಯಕ್ಷರು.—ನೀವು ಅವರಿಗೆ ಕನ್‌ವಿನ್ಸ್ ಮಾಡಿ. ಆ ನಂತರ ಇಬ್ಬರೂ ಭೇಟಿ ಆಗಿ.

ಶ್ರೀ ಕೆ. ಹೆಚ್. ಪಾಟೀಲ್.—ನಿರಪರಾಧಿ ಅಧಿಕಾರಿ ಇದ್ದಾನೆ ಎಂದು ಯಾವ ಕಾರ್ಯಕರ್ತ ಕನ್‌ವಿನ್ಸ್ ಆಗುತ್ತಾನೆ ?

ಅಧ್ಯಕ್ಷರು.—ಇದರ ಬಗ್ಗೆ ಚರ್ಚೆ ಸಾಕು.

ಶ್ರೀ ಹೆಚ್. ಜಿ. ಚನ್ನಪ್ಪ.—ನಾನು ಆ ಅಧಿಕಾರಿಯನ್ನು ಎನ್‌ಕರೇಜ್ ಮಾಡಿದಂತಾಗುತ್ತದೆಂದು ಗಂಭೀರವಾದ ಸಮಸ್ಯೆಯನ್ನು ಎತ್ತಿದ್ದಾರೆ. ನಾನು ಕಣ್ಣಾರೆ ನೋಡಿದ್ದೇನೆಂದು ಹೇಳಿವ್ವಾರೆ. ಅರ್ಧ ಗಂಟೆ ಆದ ಮೇಲೆ ನೋಡುತ್ತೇನೆಂದು ಹೇಳುತ್ತಿರುವ ಮಂತ್ರಿಗಳು ಮೇಲಧಿಕಾರಿಗಳಿಂದ ವಿಚಾರಣೆ ಮಾಡಿಸಿದ್ದೇವೆ, ಸಸ್ಪೆಂಡ್ ಮಾಡುವುದಿಲ್ಲವೆಂದು ಹೇಳುವುದು ಅನ್ಯಾಯ. ನ್ಯಾಯ

ಅನ್ಯಾಯವನ್ನು ಪರಿಶೀಲನೆ ಮಾಡಿ ಸದನಕ್ಕೆ ವರದಿಕೊಡಲಿ. ಇಲ್ಲದಿದ್ದರೆ ಅಧಿಕಾರಿಗಳನ್ನು ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಖರ್ಗೆಯವರು ಹೇಳಿದ ಹಾಗೆ ಈಗ ಈ ಸದನದಲ್ಲಿ ಇಬ್ಬರು ಸದಸ್ಯರು ಹರಿಜನ ಮೇಲೆ ದೂರು ತಂದರು. ಒಟ್ಟಿನಲ್ಲಿ ಇದು ಸತ್ಯಕ್ಕೆ ದೂರವಾದುದು. ಸುಮ್ಮನೆ ಏನಾದರೂ ಮಾಡಿ ಸದನದ ಗಮನವನ್ನು ಸೆಳೆದಿದ್ದಾರೆ, ಡೋಂಟ್ ಕೇರ್ ಫಾರ್ ಇಟ್ ಅಂದ ಹಾಗೆ ಆಯಿತು. ಅವರ ತಪ್ಪಿದ್ದರೆ ಇತರ ಶಾಸಕರು ಹರಿಜನರಿಗೆ ಅವಮಾನ ಮಾಡಿದರು ಎಂದರೆ ಅವರ ಮೇಲೆ ಕ್ರಮ ಕೈಗೊಳ್ಳಬೇಕು. ಸದನಕ್ಕೆ ರಿಪೋರ್ಟ್ ಒದಗಿಸಬೇಕು. ಇದನ್ನು ಅವರು ವೈಯಕ್ತಿಕವಾಗಿ ತೆಗೆದುಕೊಳ್ಳಬಾರದು. ದಯಮಾಡಿ ಇದರ ಬಗ್ಗೆ ವಿಚಾರಣೆ ಮಾಡಿ ಸದನಕ್ಕೆ ವರದಿ ಸಲ್ಲಿಸಬೇಕು.

ಶ್ರೀ ಬಿ. ಆರ್. ನೀಲಕಂಠಪ್ಪ —ಇಲ್ಲಾಖಾ ವಿಚಾರಣೆ ನಮಗೆ ಬೇಕಾಗಿಲ್ಲ.

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ಮಂತ್ರಿಗಳು ಉತ್ತರ ಹೇಳಿದ್ದಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ವಿಚಾರಣೆ ಮಾಡಿಸಲು ಎಲ್ಲರ ಒಪ್ಪಿಗೆ ಇದೆ. ಈ ರೀತಿಯಾಗಿ ಹೆಡ್ಮೂಲ್ಸ್ ಕ್ಯಾಸ್ಟ್ ಹೆಣ್ಣು ಮಕ್ಕಳ ಹೆಸರನ್ನು ಬಳಸಿ ದುರುಪಯೋಗ ಮಾಡುವುದು ಬೇಡ. ಸದನದಲ್ಲಿ ಪದೇ ಪದೇ ಅದನ್ನು ಹೇಳಿ ಅವರಿಗೆ ಬೇಕಾದುದನ್ನು ಸಾಧಿಸಿಕೊಳ್ಳುವುದು ಸರಿಯಲ್ಲ. ಇದರ ಬಗ್ಗೆ ತಾವು ವಿಚಾರಣೆ ಮಾಡಿಸಿ ಸದನದ ಮುಂದೆ ವರದಿಯನ್ನು ಇಡಿ. ಅದಕ್ಕಾಗಿ ಮೇಲಧಿಕಾರಿಗಳನ್ನು ಕಳುಹಿಸಿ ವಿಚಾರಣೆ ನಡೆಸಿ ವರದಿ ಇಡಿ.

ಅಧ್ಯಕ್ಷರು.—ಗೃಹ ಸಚಿವರು ಹೇಳುತ್ತಾರೆ ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಮಲ್ಲಾರಿಗೌಡ ಪಾಟೀಲರ ಗಮನ ಸೆಳೆಯುವ ಸೂಚನೆಗೆ ಉತ್ತರ ಹೇಳುತ್ತಾರೆ.

ಶ್ರೀ ಬಿ. ಸ್ವಾಮಿರಾವ್.—ಅಧಿಕಾರಿಗಳು ತಯಾರಿಸಿದ ವರದಿ ಮೇಲೆ .....

ಶ್ರೀ ಬಿ.ಎ. ಜೀವಿಜಯ.—ಜವಾಬ್ದಾರಿಯುತವಾದ ಅಧಿಕಾರಿಗಳನ್ನು ಕಳುಹಿಸಿ ವಿಚಾರಣೆ ಮಾಡಿಸಿದ್ದೇವೆ. ನಮ್ಮ ಅಧಿಕಾರಿಗಳ ಬಗ್ಗೆ ನನಗೆ ಗೊತ್ತು. ನಾನು ಬೇಜವಾಬ್ದಾರಿಯುತವಾಗಿ ಮಾಡುತ್ತಿಲ್ಲ

ಅಧ್ಯಕ್ಷರು.—ಈಗ ಮುಂದಕ್ಕೆ ಹೋಗೋಣ.

ಬೆಳಗಾವಿಯ ಬಾಲಕೃಷ್ಣ ಚಿತ್ರಮಂದಿರದಲ್ಲಿ ಬಾಂಬ್ ಆಸ್ಫೋಟಿಸಿದ ಬಗ್ಗೆ ಮಂತ್ರಿಯವರ ಹೇಳಿಕೆ.—

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—ಶ್ರೀ ಮಲ್ಲಾರಗೌಡ ಎಸ್. ಪಾಟೀಲರು ದಿನಾಂಕ ೨೨-೧-೧೯೮೬ ರಂದು ಬೆಳಗಾವಿಯ ಬಾಲಕೃಷ್ಣ ಚಿತ್ರಮಂದಿರದಲ್ಲಿ ನಡೆದ ಬಾಂಬ್ ಆಸ್ಫೋಟನೆಯ ಬಗ್ಗೆ ಕಳುಹಿಸಿದ ಸೂಚನೆಗೆ ಈ ಹೇಳಿಕೆಯನ್ನು ಮಾಡಬಯಸುತ್ತೇನೆ.

ದಿನಾಂಕ ೨೨-೧-೧೯೮೬ ರಂದು ಮಧ್ಯಾಹ್ನ ಸುಮಾರು ೩-೩೦ಕ್ಕೆ ಬೆಳಗಾವಿ ನಗರದಲ್ಲಿ ಕಿರ್ಲೋಸ್ಕರ್ ರಸ್ತೆಯಲ್ಲಿರುವ ಬಾಲಕೃಷ್ಣ ಸಿನಿಮಾ ಮಂದಿರದ ಶೌಚಾಗಾರದಲ್ಲಿ ಒಂದು ಸಣ್ಣ ಆಸ್ಫೋಟನೆ ಘಟನೆ ನಡೆದಿದೆ. ಈ ಸಮಯದಲ್ಲಿ ಮ್ಯಾಟಿನಿ ಪ್ರದರ್ಶನ ನಡೆಯುತ್ತಿದ್ದುದರಿಂದ ಸಿನಿಮಾ ಮಂದಿರಕ್ಕೆ ಬಂದ ಎಲ್ಲಾ ವ್ಯಕ್ತಿಗಳು ಚಿತ್ರಮಂದಿರದಲ್ಲಿ ಒಳಗೆ ಸುರಕ್ಷಿತರಾಗಿದ್ದರು. ಈ ಶೌಚಾಗಾರವು ಕಟ್ಟಡದ ೨ನೇ ಮಹಡಿಯಲ್ಲಿದ್ದು ಈ ಕಟ್ಟಡದಲ್ಲಿ ಶ್ರೀ ಕೃಷ್ಣ ಮತ್ತು ಬಾಲಕೃಷ್ಣ ಎಂಬ ಎರಡು ಚಿತ್ರ ಮಂದಿರಗಳಿವೆ. ಕೃಷ್ಣ ಚಿತ್ರಮಂದಿರವು ಕಟ್ಟಡದ ನೆಲ ಅಂತಸ್ತಿನಲ್ಲಿದ್ದು ಮತ್ತು ಈ ಪ್ರದೇಶವು ದಟ್ಟ ಜನಸಂದಣಿಯಿಂದ ಕೂಡಿದೆ. ಸುಮಾರು ೨೦೦ ಮೀಟರುಗಳ ಪರಿಮಿತಿಯಲ್ಲಿ ೧೨ ಚಿತ್ರಮಂದಿರಗಳು ಈ ಪ್ರದೇಶದಲ್ಲಿ ಇರುತ್ತವೆ. ಬೆಳಗಾವಿಯ ಆರಕ್ಷಕ ಅಧೀಕ್ಷಕರು ವಿಷಯ ತಿಳಿದ ಕೂಡಲೇ ಶ್ವಾನ ದಳದೊಂದಿಗೆ ಸ್ಥಳಕ್ಕೆ ಧಾವಿಸಿ, ಆಸ್ಫೋಟನೆ ಬಗ್ಗೆ ಮಾಹಿತಿ ಇದ್ದ ಎಂಎಲ್ಆರ್ಸಿಯ ಒಬ್ಬ ಬ್ರಿಗೆಡಿ